# ಡಚ್ ಕಾಲೊನಿಯೊಳಗೆ ಒಂದು ಸುತ್ತು ಹಾಕಿದಾಗ...

**ಪ್ರವಾಸ ಕೊಡುವ ಅನುಭವ ವಿಶಿಷ್ಟ ಹಾಗೂ ಅನನ್ಯ. ಅಮೆರಿಕದ ಡಚ್ ಕಾಲೊನಿಗೆ ಭೇಟಿ ನೀಡಿದ ನನ್ನ ಅನುಭವ ಸವಿನೆನಪುಗಳ ಸಾಲಿಗೆ ಸೇರಿದೆ. ಎಂದೂ ಮರೆಯಲಾಗದ ಸವಿನೆನಪಾಗಿ ಮನದಾಳದಲ್ಲಿ ನೆಲೆಯೂರಿದೆ.**

**■ ಶಾಂತಾ ನಾಗರಾಜ್**

ಪ್ರವಾಸ ಎಂದಿಗೂ ಜೀವನದಲ್ಲಿ ಅನುಭವಗಳ ಮೆಟ್ಟಿಲುಗಳಾಗುತ್ತವೆ. ಆ ನೆನಪುಗಳು ಜೀವನದುದ್ದಕ್ಕೂ ಮಧುರ ಭಾವನೆಗಳನ್ನು ಸೃಷ್ಟಿಸಿ ನೆನೆದಾಗ ಪುಳಕಗೊಳ್ಳುವಂತೆ ಮಾಡುತ್ತವೆ. 'ಸವಿನೆನಪುಗಳು ಬೇಕು ಸವಿಯಲೀ ಬದುಕು' ಎಂಬ ಮಾತು ಇಲ್ಲಿಗೆ ಅತ್ಯಂತ ಪ್ರಸ್ತುತವೆನಿಸುತ್ತದೆ.

ನನ್ನ ಪ್ರತಿ ಅಮೆರಿಕ ಭೇಟಿಯಲ್ಲೂ ಅಲ್ಲಿನ ಅಪರೂಪದ ಪ್ರವಾಸಿ ತಾಣಗಳನ್ನು ವೀಕ್ಷಿಸ ಬಯಸುತ್ತೇನೆಂದು ತಿಳಿದಿದ್ದ ಮಗಳು ಇತ್ತೀಚಿನ ಭೇಟಿಯಲ್ಲಿ 'ಇಲ್ಲೊಂದು ಮಿನಿ ಹಾಲೆಂಡ್ ಇದೆ; ನೋಡುವಿಯಂತೆ ಬಾ' ಎಂದಳು. ನನ್ನ ಮನಸ್ಸಿನಲ್ಲಿ ಎಲ್ಲಿ ಯೂರೋಪಿನ ಹಾಲೆಂಡ್ ಎಲ್ಲಿ ಉತ್ತರ ಅಮೆರಿಕಾ ಎಂಬ ಗೊಂದಲದಿಂದಲೇ ಹೊರಟೆ. ಬಡತನ, ನಿರುದ್ಯೋಗ, ಧಾರ್ಮಿಕ ಒತ್ತಡ ಹೀಗೆ ಅನೇಕ ಕಾರಣಗಳಿಂದ ಯೂರೋಪಿನ ಜನತೆ ಅಮೆರಿಕದತ್ತ ಹೊರಟು ಲೇಕ್ ಮಿಚಿಗನ್ ನದಿಯ ದಡದಲ್ಲಿ ತಮ್ಮ ಕಾಲೋನಿಯನ್ನು ಸ್ಥಾಪಿಸಿ, ಆ ಸ್ಥಳವನ್ನು ಹಾಲೆಂಡ್ ಎಂದು ಕರೆದರು ಎನ್ನಲಾಗಿದೆ.

ನಾನು ಹಾಲೆಂಡ್‌ಗೆ (ಡಚ್ ವಿಲೇಜ್) ಕಾಲಿಟ್ಟಾಗ ಒಂದು ಸುಂದರ ಪ್ರಪಂಚಕ್ಕೆ ಕಾಲಿಟ್ಟ ಅನುಭವ. ಪ್ರಾರಂಭದಲ್ಲಿ ಭಾಷಾ ಗೊಂದಲ, ಕೂಲಿ ಸಿಗುವುದೂ ಕಷ್ಟವಾಗಿದ್ದರಿಂದ ವ್ಯವಸಾಯ ಮತ್ತು ಗುಡಿ ಕೈಗಾರಿಕೆ ಪ್ರಾರಂಭಿಸಿದರು ಎಂಬುದಕ್ಕೆ ಸಾಕ್ಷಿ ಎಂಬಂತೆ ಹೆಜ್ಜೆ ಹೆಜ್ಜೆಗೂ ಗುಡಿ ಕೈಗಾರಿಕೆಗಳ ಅಂಗಡಿಯ ಸಾಲು, ಎಷ್ಟೊಂದು ವಿಧ. ಒಂದೊಂದನ್ನೂ ಕಣ್ಣು ತುಂಬಿಕೊಂಡು ಮುಂದೆ ನಡೆಯುತ್ತಿದ್ದಾಗಲೇ ಜೋರಾಗಿ ಗಾಳಿ ಬೀಸಿ ಗಡ, ಗಡ ಶಬ್ಧ 'ವಿಂಡ್ ಮಿಲ್' ಎನ್ನುತ್ತಾ ಬೇಗ ಬೇಗ ಹೆಜ್ಜೆ ಹಾಕುತ್ತಿದ್ದ ಜನರೊಡನೆ ನಾನೂ ಹೆಜ್ಜೆ ಹಾಕಿದೆ. ಬಹಳ ಹಿಂದೆ ಯೂರೋಪಿನಲ್ಲಿ ಗುಂಡು ಕಲ್ಲಿಗೆ ಹಗ್ಗ ಕಟ್ಟಿದಾಗ ಗಾಳಿ ಜೋರಾಗಿ ಬೀಸಿದಂತೆ ಕಲ್ಲು ತಿರುಗಿ ಅಲ್ಲಿ ಇಟ್ಟಿದ್ದ ದವಸ ಧಾನ್ಯಗಳು ಹಿಟ್ಟಾಗಿ ಕೆಳಗೆ ಬೀಳುತ್ತಿತ್ತು. ಈಗ ನೀರು ವಿದ್ಯುಚ್ಛಕ್ತಿಯ ಅನುಕೂಲವಿದ್ದರೂ ಮಾತೃಭೂಮಿಯ ನೆನಪಾಗಿ ಹಳೆಯ ಪದ್ಧತಿಯಲ್ಲೇ ಹಿಟ್ಟು ತಯಾರಿಸಿ ತೋರಿಸಿದರು. ಈ ವಿಂಡ್ ಮಿಲ್ಲನ್ನು ತಮ್ಮ ಮಾತೃಭೂಮಿಯ ನೆನಪಿಗಾಗಿ ಯೂರೋಪಿನಿಂದಲೇ ಸುಮಾರು (45000) ನಲವತ್ತೈದು ಸಾವಿರ ಡಾಲರ್ ಕೊಟ್ಟು ತರಿಸಿಕೊಂಡಿದ್ದಾರೆ.

ಈ ಸ್ಥಳವನ್ನು ವಿಂಡ್‌ಮಿಲ್ ದ್ವೀಪ ಎಂದೇ ಕರೆಯುತ್ತಾರೆ. ವಿಂಡ್ ಮಿಲ್ ವೀಕ್ಷಿಸಿ ಒಂದು ಕೆ.ಜಿ. ಹಿಟ್ಟನ್ನು ಕೊಂಡು ಮುಂದೆ ನಡೆದಾಗ ಎದುರಾದುದು ಶಾಲಾ ಕಾಲೇಜುಗಳ ಕಟ್ಟಡಗಳು.



ಡಚ್ಚರು ತಾವು ಕಾಲಿಟ್ಟಾಗ ಅನುಭವಿಸಿದ ಭಾಷಾ ಗೊಂದಲದಿಂದ ಮನನೊಂದು 'ಪಯನೀರ್ ಶಾಲೆ' ಎಂದು ಪ್ರಾರಂಭಿಸಿದ ಪ್ರಾಥಮಿಕ ಶಾಲೆ ಇಂದು 'ಹೋಪ್ ಕಾಲೇಜ್' ಎನಿಸಿಕೊಂಡು ಪ್ರಖ್ಯಾತವಾಗಿದೆ. ಕಾಲೇಜನ್ನು ಒಂದು ಸುತ್ತು ಹಾಕಿ ಹೊರಬಂದಾಗ ತಮ್ಮ ಸಾಂಪ್ರದಾಯಿಕ ಉಡುಪಾದ ಕಪ್ಪು ಬಣ್ಣದ ಪ್ಯಾಂಟ್ ಮತ್ತು ಷರಟಿನಲ್ಲಿ ಪುರುಷರು, ಉದ್ದ ಲಂಗ ಮತ್ತು ಕಸೂತಿ ಹಾಕಿದ ರವಿಕೆ ಧರಿಸಿದ್ದ ಮಹಿಳೆಯರು ನಮ್ಮನ್ನು ಸ್ವಾಗತಿಸಿದರು.

ನೆದರ್‌ಲ್ಯಾಂಡ್‌ನಿಂದ ಸಸಿ ಮತ್ತು ಬೀಜಗಳನ್ನು ತರಿಸಿಕೊಂಡು ರಸ್ತೆಯ ಎರಡೂ ಬದಿಗಳಲ್ಲಿ ನೆಟ್ಟಿರುವ ಟ್ಯುಲಿಪ್ ಹೂವುಗಳು ನಮ್ಮನ್ನು ಸ್ವಾಗತಿಸಿದವು. ಸೆಪ್ಟೆಂಬರ್ ತಿಂಗಳನ್ನು ಅವರಿಗೆ 'ಟ್ಯುಲಿಪ್ ಟೈಂ' ಎಂದೇ ಕರೆಯುತ್ತಾರೆ. ಈ ಸಾಂಪ್ರದಾಯಿಕ ಸ್ವಾಗತದ ನಂತರ ಸ್ವಲ್ಪ ಮುಂದೆ ನಡೆದಾಗ ಕಂಡದ್ದು ಹಳೆಯ ಕಾಲದ ತಾಮ್ರ ಮತ್ತು ಕಂಚಿನ ಪಾತ್ರೆಗಳನ್ನು ಸೌಧೆ ಒಲೆಯ ಮೇಲಿಟ್ಟು ಬೇಯಿಸುತ್ತಿದ್ದ ರುಚಿಕರವಾದ ಸಾಂಪ್ರದಾಯಿಕ ಅಡುಗೆ, ಅಡುಗೆಯ ರುಚಿ ನೋಡಿ ಮಗಳು, ಮೊಮ್ಮಗಳು ಅವರ ನೃತ್ಯಕ್ಕೆ ಕೈಜೋಡಿಸಲು ಹೊರಟಾಗ ನನ್ನ ಕಣ್ಣಿಗೆ ಬಿದ್ದದ್ದು ಸರದಿಯ ಸಾಲು. ಕುತೂಹಲದಿಂದ ಮಗಳಿಗೆ ಹೇಳಿ ನಾನೂ ಸರದಿಯ ಸಾಲಿನಲ್ಲಿ ನಿಂತೆ. ಒಳಹೊಕ್ಕಾಗ ಕಂಡದ್ದು ಒಂದು ತೂಕದ ತಕ್ಕಡಿ. ಹಿಂದಿನ ಯೂರೋಪಿನ ನಂಬಿಕೆಯ ಪ್ರಕಾರ ಭೂತಪ್ರೇತಗಳು ನಿರ್ದಿಷ್ಟವಾದ ತೂಕ ಹೊಂದಿರುತ್ತಿದ್ದವು. ಭೂತ ಪ್ರೇತಗಳೆಲ್ಲಾ ಮಹಿಳೆಯರು ಮಾತ್ರ ಹಾಗಾಗಿ ಮಹಿಳೆಯರನ್ನು ತಕ್ಕಡಿಯಲ್ಲಿ ನಿಲ್ಲಿಸಿ ಭೂತದ ತೂಕಕ್ಕೂ ಮಹಿಳೆಯ ತೂಕ ಸಮನಾಗಿದ್ದರೆ ಅವರನ್ನು ಅಮಾನುಷವಾಗಿ ಕೊಲ್ಲುತ್ತಿದ್ದರಂತೆ. ನಾನೂ ತಕ್ಕಡಿಯಲ್ಲಿ ನಿಂತು ತೂಕ ನೋಡಿಕೊಂಡು ನನ್ನ ತೂಕ ಮತ್ತು ಅಂದಿನ ದಿನಾಂಕದ ಚೀಟಿಯೊಂದಿಗೆ ಹೊರಬಿದ್ದೆ.

ಅಮೆರಿಕದ ರಾಜ್ಯಗಳಲ್ಲೊಂದಾದ ಮಿಚಿಗನ್‌ನಲ್ಲಿ ಹರಿಯುವ ಲೇಕ್ ಮಿಚಿಗನ್ ತೀರದಲ್ಲಿ ನೆಲೆಯೂರಿ ಅಲ್ಲಿಯೇ ತಮ್ಮ ಮಾತೃಭೂಮಿಯನ್ನು ಸೃಷ್ಟಿಸಿಕೊಂಡು ತಮ್ಮ ಕಲೆ, ಸಂಸ್ಕೃತಿ, ರೀತಿ ರಿವಾಜುಗಳನ್ನು ಚಾಚೂ ತಪ್ಪದೆ ಅನುಸರಿಸುತ್ತಿರುವುದಲ್ಲದೆ ತಮ್ಮ ಹಾಡು, ನೃತ್ಯ, ಕಸೂತಿ, ಆಹಾರ ಪ್ರಕೃತಿ ಸೌಂದರ್ಯದ ಸದುಪಯೋಗ ಮುಂತಾದವುಗಳಿಂದ ವೀಕ್ಷಕರ ಪಂಚೇಂದ್ರಿಯಗಳನ್ನು ತಣಿಸುವ 'ಓಲ್ಡ್ ಹಾಲೆಂಡ್' ಅಥವಾ (ಈಗ ಕರೆಸಿಕೊಳ್ಳುತ್ತಿರುವಂತೆ) ಡಚ್ ವಿಲೇಜ್. ಜನತೆಗೆ ಮನದಲ್ಲೇ ದೀರ್ಘದಂಡ ನಮಸ್ಕಾರ ಹಾಕಿದೆ. ಡಚ್ ವಿಲೇಜ್‌ನಿಂದ ಹಿಂತಿರುಗಿದಾಗ ನೆನಪಿಗೆ ಬಂದದ್ದು ನಮ್ಮ ಕನ್ನಡದ ಗಾದೆ 'ಶೆಟ್ಟಿ ಬಿಟ್ಟಲ್ಲೇ ಪಟ್ಟಣ' ಎಂಬುದು.

ಮಕ್ಕಳು, ಹಿರಿಕಿರಿಯರೆಲ್ಲರಿಗೂ ತಮ್ಮದೇ ಆದ ರೀತಿಯಲ್ಲಿ ಮನರಂಜನೆಯನ್ನು ನೀಡುವ ಈ ಡಚ್ ವಿಲೇಜ್ ಅಮೆರಿಕಗೆ ಭೇಟಿ ನೀಡುವ ಜನತೆ ವೀಕ್ಷಿಸಲೇಬೇಕಾದ ಸ್ಥಳ. ಈ ಸ್ಥಳದ ವೀಕ್ಷಣೆಯ ನೆನಪು ಸದಾ ನೆನಪಿನಂಗಳದಲ್ಲಿ ಹಸಿರಾಗಿ ನಿಂತಿದೆ. ■